ನೋಡುವುದಕ್ಕೆ ಸಾಧ್ಯವಾಗುವುದಿಲ್ಲ. ಎಲ್ಲರೂ ಷಾಮೀಲಾಗಿದ್ದಾರೆಂದು ಒಟ್ಟಿಗೆ ಹೇಳುವುದು ಬೇಡ. ದಯಮಾಡಿ ನನ್ನನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಿ. ವಿಭಾಗಾಧಿಕಾರಿಗಳು ಬಂದು ವಿಚಾರಣೆ ಮಾಡಿ ನಂತರ ಕೂಡ ನಿಮಗೆ ಸಮಾಧಾನ ಆಗಲಿಲ್ಲ ಎಂದರೆ ಮತ್ತೆ ನಾವು ಮಾತನಾಡೋಣ ಏನು ಮಾಡಬೇಕು ಎಂದು ಹೇಳಿ. ಅದನ್ನು ಇಲ್ಲಿಗೇ ಮುಗಿಸೋಣ.

(3) ಕುಂದಾಪುರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಕಾರ್ಯಕರ್ತನ ಕೊಲೆ.

ಶ್ರೀ ಪಿ.ಜೆ.ಆರ್. ಸಿಂಧ್ಯಾ (ಗೃಹ ಸಚಿವರು) : ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಗೌರವಾನ್ವಿತ ಸದಸ್ಯರಾದ ಶ್ರೀ ಪ್ರತಾಪ್ ಚಂದ್ರ ಶೆಟ್ಟಿಯವರು. ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲ್ಲಿಯವರು. ಖರ್ಗೆ ಸಾಹೇಬರು ಪ್ರಸ್ತಾಪ ಮಾಡಿದಂಥ ವಿಚಾರ ಏನಿದೆ ಈ ವಿಚಾರದ ಬಗ್ಗೆ ನಾನು ಹೇಳಿಕೆಯನ್ನು ದೀರ್ಘವಾಗಿ ಕೊಡಲಿಕ್ಕೆ ಕಷ್ಟವಾಗುತ್ತದೆ ಏಕೆಂದರೆ ಇದು ಸಬ್‌ಜುಡೀಸ್ ಆಗುತ್ತದೆ. ಮ್ಯಾಜೀಸ್ಟ್ರೇಟ್ ಕೋರ್ಟಿನಲ್ಲಿ ಈಗಾಗಲೇ ದಿನಾಂಕ 05-08-95ರಂದು ಛಾರ್ಜ್ ಶೀಟನ್ನು ಫೈಲ್ ಮಾಡಿದ್ದಾರೆ ಪೋಲೀಸ್‌ನವರು. ಪೋಲೀಸ್‌ನವರು ಸಂಬಂಧಪಟ್ಟವರನ್ನು ಅರೆಸ್ಟ್ ಮಾಡಿದ್ದಾರೆ. ಇದರ ಬಗ್ಗೆ ನಾನು ಧೀರ್ಘವಾಗಿ ಸಮಯದ ಅಭಾವ ಇರುವುದರಿಂದ ವಿಚಾರ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆದರೆ ಮಾನ್ಯ ಪ್ರತಾಪ್ ಚಂದ್ರ ಶೆಟ್ಟಿಯವರಿಗೆ ಅಥವಾ ಶ್ರೀ ವೀರಪ್ಪಮೊಯ್ಲಿಯವರಿಗೆ ಏನಾದರೂ ಸಂಶಯ ಇದ್ದರೆ ಸಂಶಯಕ್ಕೆ ಅಸ್ಪದ ಬೇಕಾಗಿಲ್ಲ. ಈ ಸರ್ಕಾರ ಅಪರಾಧಿಗಳಿಗೆ ಯಾರಿಗೂ ರಕ್ಷಣೆ ಕೊಡತಕ್ಕಂಥ ಕೆಲಸ ಮಾಡುವುದಿಲ್ಲ. ಒಂದು ಮಾತನ್ನು ಹೇಳಿದಿರಿ ಕೆಲವು ಗೌರವಾನ್ವಿತ ಸದಸ್ಯರುಗಳು. ಮಾನ್ಯ ವೀರಪ್ಪಮೊಯ್ಲಿಯವರು ಸರ್ಕಾರದ ಮೇಲೆ ಒತ್ತಡ ತಂದು ಯಾರನ್ನೋ ಏನೋ ಮಾಡಿಸಬೇಕು ಎಂದು ಹೇಳಿ. ಮಾನ್ಯ ಅಧ್ಯಕ್ಷರೇ ನಾನು ಪ್ರಾಮಾಣಿಕವಾಗಿ ಈ ಮಾತನ್ನು ಹೇಳುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಆಗಲೀ, ನನ್ನ ಜೊತೆಯಲ್ಲಾಗಲೀ, ಮಾನ್ಯ ಖರ್ಗೆಯವರಾಗಲೀ ಜೊತೆಯಲ್ಲಿ ಆಗಲಿ, ನನ್ನ ಜೊತೆಯಲ್ಲಾಗಲೀ, ಮಾನ್ಯ ಖರ್ಗೆಯವರಾಗಲೀ, ಮಾನ್ಯ ಮೊಯಿಲಿಯವರಾಗಲೀ ನಿನ್ನೆ ದಿನ ತಮ್ಮ ಕೊಠಡಿಯಲ್ಲಿ ಪ್ರಸ್ತಾಪ ಮಾಡುವುದರ ಬಗ್ಗೆ ಈ ಸದನದಲ್ಲಿ ಪ್ರಸ್ತಾಪ ಈ ವಿಚಾರ ಮಾಡುವುದರ ಬಗ್ಗೆ ಯಾವ ಸಂದರ್ಭದಲ್ಲೂ ಕೂಡ ಅವರು ಪ್ರಸ್ತಾಪ ಮಾಡಿಲ್ಲ. ಗೌರವಾನ್ವಿತ ಸದಸ್ಯರಾಗಿರತಕ್ಕಂಥ ಶ್ರೀ ಪ್ರತಾಪ್‌ಚಂದ್ರಶೆಟ್ಟಿಯವರು ಈ ಬಗ್ಗೆ ಒಂದು ಪತ್ರವನ್ನು ಬರೆದರು. ಸಿ.ಓ.ಡಿ. ಎನ್‌ಕ್ವೈರಿ ಆಗಬೇಕು ಎಂಬುದನ್ನು ಹೇಳಿದ್ದಾರೆ. ಸಿ.ಓ.ಡಿ. ಎನ್‌ಕ್ವೈರಿ ಆಗಬೇಕು ಎನ್ನುವುದನ್ನು ಸಹಿತ ಬರೆದಿದ್ದಾರೆ. ಅವರ ಪತ್ರದ ಆಧಾರದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಆಕ್ಟ್ ಮಾಡಿಲ್ಲ. ನಾವು ನಮ್ಮ ಪೋಲೀಸ್ ಇಲಾಖೆಯ ವರಿಷ್ಠರಿಂದ ವಿಚಾರಣೆ ಮಾಡಿ ಈ ವಿಚಾರಣೆ ಮಹತ್ವವನ್ನು ಅರಿತು ಅದರ ಆಧಾರದ ಮೇಲೆ ಸಿ.ಓ.ಡಿ.ಗೆ ಕೊಟ್ಟಿದ್ದೇವೆ. ನಮ್ಮ ಸಿ.ಓ.ಡಿ.ನಲ್ಲಿ ಒಳ್ಳೆಯ ದಕ್ಷತೆಯ ಅಧಿಕಾರಿಗಳು ಇದ್ದಾರೆ. ಯಾವುದೇ ಕಾರಣದಿಂದಲೂ ಡೈರಕ್ಟಾಗಿ ಅಥವಾ ಇನ್‌ಡೈರಾಕ್ಟಾಗಿ ಇದರಲ್ಲಿ, ಯಾರು ಅಕ್ಯೂಸ್ಡ್ ಇದ್ದಾರೆ ಅವರನ್ನು ಬಿಡುಗಡೆ ಮಾಡತಕ್ಕಂಥ ರಕ್ಷಣೆ ಮಾಡತಕ್ಕಂಥ ಪ್ರಶ್ನೆ ಬರುವುದಿಲ್ಲ ಎನ್ನತಕ್ಕಂಥ ಭಾವನೆಯನ್ನು ಈ ಸದನಕ್ಕೆ ತಮ್ಮ ಮುಖಾಂತರ ಕೊಡುತ್ತೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಇದು ಕೋರ್ಟ್‌ನಲ್ಲಿದೆ. ಇಲ್ಲಿ ಚರ್ಚೆ ಮಾಡಿದರೆ ಸಬ್‌ಜ್ಯುಡಿಸ್ ಆಗುತ್ತದೆಂದು ಹೇಳಿದರು. Expunged as orderd by the chain ಕೂಡ ಅವರು ನಿರಾಪರಾಧಿ ಎಂದು ಹೇಳಿದ್ದಾರೆ.

(ಗೊಂದಲ)

MR. SPEAKER : There is no scope. you cannot take the name of the Opposition Leader often. It is not a good tradition. He is the Leader of teh Opposition. I have to guard the Office.

ಕೊಜೆಂಟ್ರಿಕ್ಸ್‌ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಸಭೆಯ ಮುಂದೆ ಮಂಡಿಸುವುದು

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ ಈ ಹಿಂದೆ ಮಾನ್ಯ ಸಭಾನಾಯಕರು ಹಾಗೂ ನಾನೂ ಹೇಳಿದಹಾಗೆ ಕೊಜೆಂಟ್ರಿಕ್ಸ್ ಬಗ್ಗೆ ಸರ್ಕಾರದಲ್ಲಿರತಕ್ಕ ಎಲ್ಲ ದಾಖಲಾತಿಗಳನ್ನೂ ಈ ಸದನದ ಮುಂದಿಡುತ್ತೇವೆಂದು ಹೇಳಿದ್ದೆವು. MOU signed by the then government in 1992 and also a government order issued by the then Government in 1994 - i.e., Mr. Veerappa Moily's Government the Order is dated 30th Septemberd 1994 and power purchase agreement

ಈ ಮೂರೂ ದಾಖಲಾತಿಗಳನ್ನೂ ಈ ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ಇಂದು ದಿನಾಂಕ 9ನೇ ಆಗಸ್ಟ್ 1995ರಂದು ಪ್ರಶ್ನೋತ್ತರ ವಿಲ್ಲದ ಕಾರಣ ಸದನದಲ್ಲಿ ಉತ್ತರಿಸುವ 3ನೇ ಪಟ್ಟಿಯಲ್ಲಿರುವ 15ಪ್ರಶ್ನೆಗಳ ಪೈಕಿ 12 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳನ್ನು ಸಭೆಯ ಮುಂದೆ ಮಂಡಿಸುವುದು

ಪ್ರಾಥಮಿಕ ಶಾಲಾ ಮಕ್ಕಳಿಗೆ ಪಠ್ಯ ಪುಸ್ತಕ ವಿತರಣೆ

544 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪ್ರಸಕ್ತ ಸಾಲಿನಲ್ಲಿ ರಾಜ್ಯದಲ್ಲಿನ ಪ್ರಾಥಮಿಕ ಶಾಲೆಗಳಿಗೆ ಯಾವ ಯಾವ ತರಗತಿ ಮಕ್ಕಳಿಗೆ ಪಠ್ಯ ಪುಸ್ತಕಗಳನ್ನು ಸರ್ಕಾರದ ವತಿಯಿಂದ ಉಚಿತವಾಗಿ ಒದಗಿಸಲಾಗಿದೆ?

ಆ) ಈ ಹಂಚಿಕೆ ಮಾಡಿದ ಕಾರ್ಯಕ್ರಮಕ್ಕೆ ಸರ್ಕಾರದವರು ನಿಗಧಿಪಡಿಸಿರುವ ಹಾಗೂ ಹಂಚಿಕೆ ಮಾಡಿರುವ ಹಣವೆಷ್ಟು?

ಶ್ರೀ ಹೆಚ್.ಜಿ. ಗೋವಿಂದಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1ರಿಂದ 4ನೇ ತರಗತಿಯಲ್ಲಿ ಕಲಿಯುತ್ತಿರುವ ಎಲ್ಲಾ ಮಕ್ಕಳಿಗೂ ಮತ್ತು 5 ರಿಂದ 7ನೇ ತರಗತಿಯಲ್ಲಿ ಕಲಿಯುತ್ತಿರುವ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ಮಕ್ಕಳಿಗೆ ಮಾತ್ರ ಪಠ್ಯಪುಸ್ತಕಗಳನ್ನು ಸರ್ಕಾರದ ವತಿಯಿಂದ ಉಚಿತವಾಗಿ ಒದಗಿಸಲಾಗುತ್ತಿದೆ.